ಶ್ರೀ ಅಜೀಜ್ ಸೇಠ್ (ಕಾರ್ಮಿಕ ಮತ್ತು ಪಕ್ಷ ಮಂತ್ರಿಗಳು).—

ಅ) ಹೌದು.

ಆ) ಇದರ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಗಳ ಸಮ್ಮುಖದಲ್ಲಿ ದಿನಾಂಕ ೧೨-೪-೧೯೮೩ ರಂದು ಸಭೆಯೊಂದರಲ್ಲಿ ಚರ್ಚಿಸಲಾಗಿದೆ.

ಕಟ್ಟಡವನ್ನು ನಿರ್ಮಿಸಲೋಸುಗ ಮಂಗಳೂರಿನ ಮೇರಿ ಹಿಲ್ ಎಂಬಲ್ಲಿ ಸ್ಥಳಾವಕಾಶವನ್ನು ಮಾಡಲಾಗಿದೆ. ಆದುದರಿಂದ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಮೋಟಾರು ವಾಹನಗಳ ತೆರಿಗೆಯಲ್ಲಿ ರಸ್ತೆ ರಿಪೇರಿ ಬಗ್ಗೆ ಸ್ಥಳೀಯ ಸಂಸ್ಥೆಗಳಿಗೆ ಕೊಡುವ ಅನುದಾನ

೨೩೫೫ (೧೫೯೯) ಶ್ರೀ ವಿ. ಧನಂಜಯ ಕುಮಾರ್ (ಮಂಗಳೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಮೋಟಾರು ವಾಹನಗಳ ಮೇಲಿನ ತೆರಿಗೆ ವಸೂಲು ಮಾಡಿರುವ ಮೊತ್ತದಿಂದ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ರಸ್ತೆಗಳ ರಿಪೇರಿಗೆ ಕೊಡುವ ಅನುದಾನದ ಅಂಶವೆಷ್ಟು?

ಆ) ಈ ಅನುದಾನವು ರಸ್ತೆಗಳ ರಿಪೇರಿಗೆ ಸಾಕಾಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಈ ರೀತಿ ಕೊಡುತ್ತಿರುವ ಅನುದಾನದ ಅಂಶವನ್ನು ಹೆಚ್ಚಿಸುವ ಆಲೋಚನೆ ಸರಕಾರಕ್ಕೆ ಇದೆಯೇ?

ಈ) ಹಾಗಿದ್ದಲ್ಲಿ ಹಿಂದಿನ ವರ್ಷಗಳಿಗೂ ಅನ್ವಯಿಸುವಂತೆ ಈ ಹಣ ಕೊಡಲಾಗುತ್ತದೆಯೇ?

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಸ್ಥಳೀಯ ಮಂಡಳಿಗೆ ಕೊಡಲಾಗುತ್ತಿರುವ ಪರಿಹಾರಧನವು ಆಯಾ ಸ್ಥಳೀಯ ಮಂಡಳಿಗಳಿಗೆ ಮೋಟಾರು ವಾಹನ ತೆರಿಗೆ ಅಥವಾ ಶುಲ್ಕದಿಂದ ಬರತಕ್ಕ ವಾರ್ಷಿಕ ಆದಾಯದ ಅಂದರೆ ೩೧ನೇ ಮಾರ್ಚಿ ೧೯೫೭ನೇ ಇಸವಿಯ ಹಿಂದಿನ ಮೂರು ವರ್ಷಗಳ ಮೊತ್ತದ ಸಮಭಾಗದ ಸರಾಸರಿ ಪಾಯಕ್ಕೆ ಪರಿಯಾಗಿ ಕರ್ನಾಟಕ ಮೋಟಾರು ವಾಹನ ತೆರಿಗೆಯ ೧೯೫೭ನೇ ಅಧಿನಿಯಮ ೨೦ರ ಪ್ರಕಾರ ನಿಗದಿ ಪಡಿಸಲಾಗಿದೆ. ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟನ್ನು ಕೊಡುತ್ತಿರುವುದು ಎಂಬುದನ್ನು ಇದಕ್ಕೆ ಲಗತ್ತಿಸಿರುವ ಅನುಬಂಧ "ಎ" ನಲ್ಲಿ ತೋರಿಸಲಾಗಿದೆ.

ಆ) ಹೌದು.

ಇ) ಸರ್ಕಾರ ಈ ವಿಚಾರವನ್ನು ಪರಿಶೀಲಿಸುತ್ತಿದೆ.

ಈ) ಇಲ್ಲ.

ANNEXURE-'A'

Statement showing the details of payment made towards compensation to local bodies in different districts in Karnataka State out of Motor Vehicles Tax.

Sl.No.	Name of the District	Compensation paid
		Rs.
1	Bangalore	4,69,695
2	Belgaum	85,278
3	Bellary	92,075
4	Bidar	20,512
5	Bijapur	67,675
6	Chickmagalur	21,521
7	Chitradurga	26,241
8	Gulbarga	69,179
9	Dharwar	1,32,241
10	Kolar	332
11	Karwar	16,619
12	Hassan	22,294
13	Madikeri	35,672
14	Mandya	17,700
15	Mangalore	1,78,115
16	Mysore	43,344
17	Raichur	46,657
18	Shimoga	33,391
19	Tumkur	26,278
	Total	14,04,819